# ಪರಿಸರ ಮೇಲಿನ ಪ್ರಭಾವದ ಮಾನದಂಡ ವರದಿಯ

## ಪ್ರಮುಖ ಸಾರಾಂಶ

**115.33 ಹೆಕ್ಟೇರ್ (ಎಂಎಲ್-2) ವಿಸ್ತೀರ್ಣದ ಸ್ವಂತ ಸುಣ್ಣದಕಲ್ಲಿನ ಗಣಿಯಿಂದ**

**0.50 ಎಂಟಿಪಿಎ ಸುಣ್ಣದ ಕಲ್ಲಿನ ಉತ್ಪಾದನೆ**

**(ಅರಣ್ಯೇತರ ವಲಯ)**

*ಯಾದವಾಡ ಗ್ರಾಮ,*

*ಗೋಕಾಕ ತಾಲೂಕು, ಬೆಳಗಾವಿ ಜಿಲ್ಲೆ, ಕರ್ನಾಟಕದಲ್ಲಿ*

*ಗಣಿಗುತ್ತಿಗೆ*

ದಾಲ್ಮಿಯಾ ಸಿಮೆಂಟ್ (ಭಾರತ್) ಲಿಮಿಟೆಡ್

TRANSLATION SERVICES PVT. LTD.
Authorized Signatory

TRIOINDIA IT TRANSLATION SERVICES PVT LTD
Certified Translation

# ಪ್ರಮುಖ ಸಾರಾಂಶ

## 1.0 ಪರಿಚಯ

**ದಾಲ್ಮಿಯಾ ಸಿಮೆಂಟ್ (ಭಾರತ್) ಲಿಮಿಟೆಡ್ (ಡಿಸಿಬಿಎಲ್)** ಕರ್ನಾಟಕದ ಬೆಳಗಾವಿ ಜಿಲ್ಲೆಯ (ಹಿಂದಿನ ಬೆಳಗಾಂ ಜಿಲ್ಲೆ) ಗೋಕಾಕ ತಾಲೂಕಿನ ಯಾದವಾಡ ಗ್ರಾಮದಲ್ಲಿ ಸ್ವಂತ ವಿದ್ಯುತ್ ಸ್ಥಾವರದೊಂದಿಗೆ ಗ್ರೀನ್ ಫೀಲ್ಡ್ ಸಿಮೆಂಟ್ ಸ್ಥಾವರ ಸ್ಥಾಪಿಸಿದೆ. ಇದು 2015 ರಲ್ಲಿ ತನ್ನ ಕಾರ್ಯಾರಂಭ ಮಾಡಿದೆ. ಸ್ಥಾವರದ ಸುಣ್ಣದ ಕಲ್ಲಿನ ಅಗತ್ಯತೆಯನ್ನು ಉದ್ದೇಶಿತ ಎರಡು ಸ್ವಂತ ಗಣಿ ಗುತ್ತಿಗೆಯಿಂದ ಎಂದರೆ ಬೆಳಗಾವಿ ಜಿಲ್ಲೆಯ ಗೋಕಾಕ ಮತ್ತು ರಾಮದುರ್ಗ ತಾಲೂಕುಗಳ ಯಾದವಾಡ ಮತ್ತು ಕುನ್ನಾಲ್ ಗ್ರಾಮಗಳ ಬಳಿಯ 1228.63 ಹೆಕ್ಟೇರ್ (ಎಂಎಲ್-1) ಯಾದವಾಡ ಲೈಮ್ ಸ್ಟೋನ್ ಮತ್ತು ಕ್ಲೇ ಗಣಿಯಿಂದ ಹಾಗೂ ಕರ್ನಾಟಕದ ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಯಾದವಾಡ ಗ್ರಾಮದ ಬಳಿಯ 115.33 ಹೆಕ್ಟೇರ್ ಗಣಿಗುತ್ತಿಗೆಯಿಂದ (ಎಂಎಲ್-2) ಪೂರೈಸಬೇಕೆಂದು ಯೋಜಿಸಲಾಗಿದೆ. ವಿವರಿಸಲಾದ ಎರಡೂ ಗಣಿಗಳನ್ನು ಖನಿಜ ಸಂರಕ್ಷಣೆ ಮತ್ತು ವಿಶ್ವಾಸಾರ್ಹ ಗಣಿಗಾರಿಕೆಗಾಗಿ ಕಾನೂನುಬದ್ಧವಾಗಿ ಸಮ್ಮಿಶ್ರಗೊಳಿಸಬಹುದಾಗಿದ್ದು, ಎಂಒಇಎಫ್ & ಸಿಸಿ ಯಿಂದ ಎಂಎಲ್-1 ಗಾಗಿ ಈಗಾಗಲೇ ಪರಿಸರ ಸಂಬಂಧಿತ ಕ್ಲಿಯರೆನ್ಸ್ ಪಡೆಯಲಾಗಿದೆ. ಪ್ರಸ್ತುತ ಎಂಎಲ್-2 ಗಾಗಿ ಇಸಿ ಪಡೆಯುವ ಪ್ರಸ್ತಾವನೆಯಿದೆ.

## 2.0 ಉದ್ದೇಶಿತ ಯೋಜನೆ

**ದಾಲ್ಮಿಯಾ ಸಿಮೆಂಟ್ (ಭಾರತ್) ಲಿ (ಡಿಸಿಬಿಎಲ್)** ತನ್ನ ಉದ್ದೇಶೀತ ಗಣಿ ಗುತ್ತಿಗೆ ವಲಯ ಎಂಎಲ್-2 ನಿಂದ 0.5 ಎಂಟಿಪಿಎ ಯ ಗಣಿ ಸುಣ್ಣದಕಲ್ಲಿನ ಗಣಿಗಾರಿಕೆ ಮಾಡಲು ಪ್ರಸ್ತಾವಿಸಿದ್ದು ಈ ಪ್ರಸ್ತಾವಿತ ಪ್ರದೇಶ ಕರ್ನಾಟಕದ ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಯಾದವಾಡ ಗ್ರಾಮದ 115.33 ಹೆಕ್ಟೇರ್ ನಲ್ಲಿ ಹರಡಿಕೊಂಡಿದೆ.

ಉದ್ದೇಶಿತ ಗಣಿಯ ಒಟ್ಟು ಎಂಎಲ್ ವಲಯ ಖಾಸಗಿ ಪಟ್ಟಾ ಭೂಮಿಯಾಗಿದ್ದು, ಇದರಲ್ಲಿ ಪ್ರಸ್ತುತ ಭೂಮಿಯನ್ನು 83.27 ಹೆಕ್ಟೇರ್ ಕೃಷಿ ಭೂಮಿಯಾಗಿ ಬಳಸುತ್ತಿದ್ದು 32.07 ಹೆಕ್ಟೇರ್ ಕಾಲುವೆಯ ಅಡಿಯಲ್ಲಿದೆ (ನೀರಿನ ಪ್ರದೇಶ)

ಪ್ರಸ್ತಾವಿತ ವಲಯ ಪ್ರಮುಖವಾಗಿ ಕೃಷಿ ಭೂಮಿಯಾಗಿದ್ದು ಇದು ಮಣ್ಣಿನಿಂದ ಮತ್ತು ಸ್ವಲ್ಪಪ್ರಮಾಣದ ಸುಣ್ಣದಕಲ್ಲಿನ ಶಿಲೆಗಳಿಂದ ಆವೃತವಾಗಿದೆ.

Authorized Signatory

TRIDINDIA IT TRANSLATION SERVICES PVT. LTD.
Certified Translation

ಪ್ರಸ್ತಾವಿತ ಎಂಎಲ್ ಪ್ರದೇಶಕ್ಕೆ ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ 14/ಎಎಂಎಲ್/2006/7097 ನಲ್ಲಿ ಆಗಸ್ಟ್ 21, 2007 ರಂದು ಎಲ್‌ಓಐ ಮಂಜೂರು ಮಾಡಿದೆ. ಮೇಲಿನ ಸ್ಥಳದ ಅಭಿವೃದ್ಧಿಶೀಲ ಗಣಿ ಮುಕ್ತಾಯ ಯೋಜನೆಯೊಂದಿಗೆ ಗಣಿಯೋಜನೆಯನ್ನು ಭಾರತೀಯ ಗಣಿ ಸಂಸ್ಥೆ (ಐಬಿಎಂ) ಪತ್ರ ಸಂಖ್ಯೆ ಎಂಪಿ/ಬಿ ಎಲ್ ಜಿ/ಗೋವಾ(ಕರ್ನಾಟಕ)/ಪಟ್ಟಿಮಾಡಲಾದ-184-ಎಸ್ ಜೆಡ್ ದಿನಾಂಕ 15 ನೇ ಜುಲೈ 2009 ರಂದು ಅನುಮೋದಿಸಿದೆ.

ಪ್ರಸ್ತಾವಿತ ಪ್ರದೇಶದಲ್ಲಿ ಗಣಿಗಾರಿಕೆಯನ್ನು ಸಾಂಪ್ರದಾಯಿಕ ಹೊರಮೈ ಪದ್ಧತಿಯಂತೆ ಕೊರೆಯುವಿಕೆ, ಸಿಡಿಸುವಿಕೆ, ತುಂಬುವಿಕೆ ಮತ್ತು ಸಾರಿಗೆಯ ಮೂಲಕ ನಡೆಸಲಾಗುವುದು.

ಎರಡೂ ಗಣಿಗಳಿಗೆ (ಎಂಎಲ್-1 ಮತ್ತು ಎಂಎಲ್-2) ಮೂಲಭೂತ ಸೌಕರ್ಯ ಮತ್ತು ಗಣಿ ಸಲಕರಣೆ/ಯಂತ್ರಗಳು ಒಂದೇ ರೀತಿಯಿದ್ದು ಇದನ್ನು ಎಂಎಲ್-1 ರ (1228.63 ಹೆಕ್ಟೇರ್) ಬಂಡವಾಳ ವೆಚ್ಚದಲ್ಲಿ ಪರಿಗಣಿಸಲಾಗಿದೆ. ಆದ್ದರಿಂದ ಪ್ರಸ್ತುತ ಗಣಿಗಾರಿಕೆಗೆ ಗಣಿ ಸಲಕರಣೆ/ಯಂತ್ರಗಳಿಗೆ ಗಣಿವಿಷಯಕ್ಕಾಗಿ ಹೆಚ್ಚಿನ ಬಂಡವಾಳ ವೆಚ್ಚ ಬೇಕಾಗುವುದಿಲ್ಲ. ಆದರೆ ವಿವಿಧ ಚಟುವಟಿಕೆಗಳಿಗೆ ಗಣಿವಿಷಯದ ಮೇಲೆ ರೂ 2 ಕೋಟಿ ಯೋಜನಾ ವೆಚ್ಚ ಭರಿಸಲಾಗುತ್ತದೆ. ಅಂತೆಯೇ ಪರಿಸರ ನಿರ್ವಹಣಾ ಯೋಜನೆಯನ್ನು ಅಳವಡಿಸಲು ರೂ 8 ಲಕ್ಷ ಹಾಗೂ ಆವರ್ತನ ವೆಚ್ಚ ವಾರ್ಷಿಕ ರೂ 10 ಲಕ್ಷವೆಂದು ಅಂದಾಜಿಸಲಾಗಿದೆ.

## 3.0 ತಳಹದಿ ಪರಿಸರ

ಪರಿಸರ ಪ್ರಭಾವ ಮಾನದಂಡ ಅಧ್ಯಯನದ ಭಾಗವಾಗಿ, ತಳಹದಿ ಪರಿಸರ ನಿರ್ವಹಣೆಯನ್ನು -2014 ರ ಮುಂಗಾರು ನಂತರದಲ್ಲಿ ನಡೆಸಲಾಗಿದ್ದು, ಇದು 2014 ರ ಅಕ್ಟೋಬರ್ ನಿಂದ ಡಿಸೆಂಬರ್ ವರೆಗೆ ಒಳಗೊಂಡಿದೆ.

### ಹವಾಮಾನ

ಈ ಅವಧಿಯಲ್ಲಿ ಪ್ರಮುಖ ಗಾಳಿಯ ದಿಕ್ಕು ಈಶಾನ್ಯ-ಪೂರ್ವ ಈಶಾನ್ಯ-ಪೂರ್ವ-ನೈಋತ್ಯದಿಂದ 16.85% ಕೂಡಿದ್ದು ಹಾಗೂ ಗಂಟೆಗೆ 1.0 ಕಿಲೋಮೀಟರ್ ಗಿಂತ ಕೂಡಿದ್ದು ಕಡಿಮೆ ಮಂದಗಾಳಿಯು 38.54%

Authorized Signatory

ನಷ್ಟಿರುತ್ತದೆ. ಈ ಅವಧಿಯಲ್ಲಿ ಸರಾಸರಿ ಗಾಳಿಯ ವೇಗ ಗಂಟೆಗೆ 10 ಕಿಲೋಮೀಟರ್ ಗಿಂತ ಮೇಲಿರುತ್ತದೆ.

**ಗಾಳಿ ಪರಿಸರ**

ಅಧ್ಯಯನ ವಲಯದಲ್ಲಿ ಗಮನಿಸಲಾದ ಸೂಕ್ತ ಗಾಳಿಯ ಗುಣಮಟ್ಟ ವಸತಿಪ್ರದೇಶ, ಗ್ರಾಮೀಣ ಮತ್ತು ಇತರ ವಲಯಗಳಿಗೆ ಎನ್ಎಎಕ್ಯು ಶಿಫಾರಸು ಮಾಡಿದ ಮಾನದಂಡದ ಪರಿಮಿತಿಯೊಳಗೆ ಇದೆ.

**ಅಧ್ಯಯನ ವಲಯದಲ್ಲಿ ಗಾಳಿಯ ಗುಣಮಟ್ಟ (ಎಲ್ಲಾ ಮೌಲ್ಯಗಳೂ *μg/m³ ನಲ್ಲಿದ)***

| ಮಾನದಂಡ | 98 ನೇ ಪರ್ಸಂಟೈಲ್ ಮೌಲ್ಯ (ug/m³) |
|---|---|
| ನಿರ್ದಿಷ್ಟ ಧಾತು - $PM_{10}$ | 58-65 |
| ನಿರ್ದಿಷ್ಟ ಧಾತು - $PM_{2.5}$ | 34-41 |
| ಗಂಧಕದ ಡೈ ಆಕ್ಸೈಡ್ - $SO_2$ | 8.9-14.8 |
| ಸಾರಜನಕದ ಆಕ್ಸೈಡ್ ಗಳು - NOx | 9.8-17.5 |

**ಶಬ್ದ ಪರಿಸರ**

ಅಧ್ಯಯನ ವಲಯದಲ್ಲಿ ಶಬ್ದದ ಮಟ್ಟವನ್ನು ಅಳೆಯಲು 10 ಮೇಲ್ವಿಚಾರಣಾ ಸ್ಥಳಗಳನ್ನು ಆಯ್ಕೆಮಾಡಲಾಗಿತ್ತು. ದಾಖಲಾದ ಶಬ್ದದ ಗುಣಮಟ್ಟ ಹಗಲಿನಲ್ಲಿ 49.6˚-53.7 ಡೆಸಿಬಲ್ (ಎ) ಮತ್ತು ರಾತ್ರಿಯ ಸಮಯದಲ್ಲಿ 41.3-51.3 ಡೆಸಿಬಲ್ (ಎ) ಶ್ರೇಣಿಯಲ್ಲಿರುವುದು ಕಂಡುಬಂದಿದೆ.

**ನೀರಿನ ಪರಿಸರ**

ಅಂತರ್ಜಲ ಮತ್ತು ಮೇಲ್ಮೈ ನೀರಿನ ಮಾದರಿಗಳನ್ನು ವಿಶ್ಲೇಷಿಸಿದಾಗ ಅದು ಪರಿಮಿತಿಯೊಳಗೆ ಇರುವುದು ಕಂಡುಬಂದಿದೆ.

**ಮಣ್ಣಿನ ಪರಿಸರ**

ಮಣ್ಣಿನ ಗುಣಮಟ್ಟವನ್ನು ಅಧ್ಯಯನ ಮಾಡಲು ಮಣ್ಣಿನ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಿಸಿದಾಗ ಮಧ್ಯಮ ಫಲವತ್ತತೆ ಕಂಡುಬಂದಿದೆ.

Certified Translation
Authorized Signatory

**ಜೈವಿಕ ಪರಿಸರ**

ರಾಷ್ಟ್ರೀಯ ಉದ್ಯಾನವನ, ವನ್ಯಜೀವಿಗಳ ರಕ್ಷಿತಾರಣ್ಯ, ಜೈವಿಕ ಭೂಗೋಳಿಕ ಸಂರಕ್ಷಣೆಗಳಂತಹ ಯಾವುದೇ ಜೈವಿಕ ಸೂಕ್ಷ್ಮ ವಲಯಗಳು ಎಂಎಲ್ ಗಡಿಯಿಂದ 10 ಕಿಮೀವರೆಗಿನ ತ್ರಿಜ್ಯದ ವಲಯದಲ್ಲಿ ಕಂಡುಬಂದಿಲ್ಲ. ಆದರೆ, ಕೆಲವು ರಕ್ಷಿತ ಅರಣ್ಯಗಳು 10 ಕಿಮೀ ಅಧ್ಯಯನ ವಲಯದೊಳಗೆ ಕಂಡುಬಂದಿದೆ.

ಯಾವುದೇ ಅಪಾಯದಂಚಿನ, ರೋಗಕಾರಕ ಅಥವಾ ಭಯದಂಚಿನ ಜೀವಿಗಳು ಕಂಡುಬಂದಿಲ್ಲ ಎಂದು ಅಧ್ಯಯನದಿಂದ ತಿಳಿದುಬಂದಿದೆ.

## 4.0 ನಿರೀಕ್ಷಿತ ಪರಿಸರದ ಮೇಲಿನ ಪ್ರಭಾವಗಳು ಮತ್ತು ಶಮನಕಾರಿ ಮಾನದಂಡಗಳು

### 4.1 ಗಾಳಿಯ ಪರಿಸರ

ಗಾಳಿಜನ್ಯ ಅಣುಧಾತುಗಳು ತೆರೆದ ಮೇಲ್ಮೈ ಗಣಿಗಾರಿಕೆಯಿಂದ ಮುಖ್ಯ ವಾಯುಮಾಲಿನ್ಯಕಾರಕವಾಗಿದೆ. ವಿವಿಧ ಹೊರಸೂಸುವಿಕೆಯ ಮೂಲಗಳನ್ನು ಪ್ರಸ್ತಾವಿತ 0.5 ಎಂಟಿಪಿಎ ಸುಣ್ಣದ ಕಲ್ಲಿನ ಉತ್ಪಾದನೆಗೆ ಗಣಿ ಕಾರ್ಯವಿಧಾನದಿಂದ ಗುರುತಿಸಲಾಗಿದೆ.

ಮೇಲಿನದರೊಂದಿಗೆ, ಸಿಮೆಂಟ್ ಸ್ಥಾವರ ಮತ್ತು ಗಣಿ ಗುತ್ತಿಗೆ ಪ್ರದೇಶದಿಂದಲೂ (ಎಂಎಲ್-1) ಸೇರಿಸಿ ಒಟ್ಟು ಪ್ರಭಾವದ ಅಂದಾಜನ್ನು ಪರಿಗಣಿಸಲಾಗಿದೆ.

ಪ್ರಸ್ತುತ ಹವಾಮಾನದ ಸ್ಥಿತಿಗಳಿಗೆ ಇದರಿಂದ ಲಭ್ಯವಾಗುವ ಸಂಚಯಿತ ತಳಮಟ್ಟದ ಸಾಂದ್ರತೆಗಳನ್ನು ಗಣಿತದ ಮಾದರಿ ಬಳಸಿ ಅಂದಾಜಿಸಲಾಗಿದೆ.

ತಳಹದಿಯೊಂದಿಗೆ ಊಹಾತ್ಮಕ ಸಂಚಿತ ತಳಮಟ್ಟದ ಸಾಂದ್ರತೆಯೊಂದಿಗೆ ಒಟ್ಟಾರೆ ಸನ್ನಿವೇಶವನ್ನು ಕೆಳಗೆ ನೀಡಲಾಗಿದೆ.

**ಊಹಾತ್ಮಕ ತಳಹಂತದ ಸಾಂದ್ರತೆ ಮತ್ತು ಒಟ್ಟಾರೆ ಸನ್ನಿವೇಶ, $\mu g/m^3$**

**(ಪರಿಗಣಿಸಲಾದ ಮೂಲಗಳು: ಸಿಮೆಂಟ್ ಸ್ಥಾವರ, ವಿದ್ಯುತ್ ಸ್ಥಾವರ, ಎಂಎಲ್-1 ಮತ್ತು ಎಂಎಲ್-2)**

Authorized Signatory

| 24-ಗಂಟೆಗಳ ಸಾಂದ್ರತೆ | ಅಣುವಿನ ಧಾತು-10 ($PM_{10}$) | ಅಣುವಿನ ಧಾತು-2.5 ($PM_{2.5}$) | ಗಂಧಕದ ಡೈ ಆಕ್ಸೈಡ್ ($SO_2$) | ಸಾರಜನಕದ ಆಕ್ಸೈಡ್ ಗಳು ($NO_x$) |
|---|---|---|---|---|
| ತಳಮಟ್ಟದ ಸಾಂದ್ರತೆ, ಗರಿಷ್ಠ | 65 | 41 | 14.8 | 17.50 |
| ಊಹಾತ್ಮಕ ಅಂತರ್ಜಲ ಮಟ್ಟದ ಸಾಂದ್ರತೆ (ಗರಿಷ್ಠ) | 13.98 | 1.99 | 19.19 | 20.29 |
| ಒಟ್ಟಾರೆ ಸನ್ನಿವೇಶ | 78.98 | 42.99 | 33.99 | 37.79 |
| ಕೈಗಾರಿಕೆ, ಗ್ರಾಮೀಣ ಮತ್ತು ವಾಸಸ್ಥಾನಗಳಿಗೆ ಎನ್ ಎ ಎ ಕ್ಯು ಮಾನದಂಡಗಳು | **100** | **60** | **80** | **80** |

**ವಾಯುಮಾಲಿನ್ಯ ನಿಯಂತ್ರಣ ಮಾನದಂಡಗಳು**

ಬಿಡುಗಡೆಯಾಗುವ ಹರಡುವ ಧೂಳುಗಳನ್ನು ನಿಯಂತ್ರಿಸಲು ಪರಿಸರ ನಿಯಂತ್ರಣದ ಮಾನದಂಡಗಳನ್ನು ಕೆಳಗೆ ನೀಡಲಾಗಿದೆ:

- ನೀರಿನ ಸಿಂಚನ ಸೌಲಭ್ಯಗಳನ್ನು ಹೊಂದಿರುವ ಯಂತ್ರಗಳಿಂದ ಕೊರೆಯುವುದರಿಂದ ಕೊರೆತದಿಂದ ಹೊರಸೂಸುವ ಧೂಳುಗಳನ್ನು ಕಡಿಮೆ ಮಾಡುವುದು.
- ಸಿಡಿತದ ಗುಡ್ಡೆಗಳು ಮತ್ತು ವಿಸ್ತರಿಸಿದ ರಸ್ತೆಗಳ ಮೇಲೆ ನೀರಿನ ಟ್ಯಾಂಕರ್ ಗಳಿಂದ ನಿಯಮಿತವಾಗಿ ನೀರು ಚಿಮುಕಿಸುವುದು
- ದಿನಕ್ಕೆ 5 ಎಂ$^3$ ಯಷ್ಟು ನೀರನ್ನು ಗಣಿಯಲ್ಲಿನ ಕಾರ್ಯವಿಧಾನದಿಂದ ಬರುವ ಧೂಳನ್ನು ತಗ್ಗಿಸಲು ಬಳಸಲಾಗುತ್ತದೆ.
- ರಂಧ್ರಗಳನ್ನು ಕೊರೆಯಲು ಹರಿತವಾದ ಡ್ರಿಲ್ ಬಿಟ್ ಗಳನ್ನು ಮತ್ತು ಬಿಟ್ ಮರುಅರೆಯಲು ಜೋಡಣೆಗಳನ್ನು ಬಳಸಲಾಗುತ್ತದೆ. ಗರಿಷ್ಠ ಚಾರ್ಜ್ ಮತ್ತು ಸಮಯ ವಿಳಂಬ ಗುರುತಿಸುವಿಕೆಯನ್ನು ಬಳಸಿ ರಂಧ್ರಗಳನ್ನು ಚಾರ್ಜ್ ಮಾಡುವುದು.
- ಗುಂಡಿಗಳನ್ನು ಹೆಚ್ಚಾಗಿ ತುಂಬುವುದು ಮತ್ತು ರಸ್ತೆಗಳಲ್ಲಿ ನಿರಂತರವಾಗಿ ಚೆಲ್ಲುವುದನ್ನು ತಡೆಗಟ್ಟುವುದು

Authorized Signatory

- ವಾಹನಗಳು ಮತ್ತು ಯಂತ್ರಗಳನ್ನು ಹೊರಸೂಸುವಿಕೆ ಕನಿಷ್ಟಗೊಳಿಸಲು ಉತ್ತಮವಾದ ಸ್ಥಿತಿಯಲ್ಲಿ ನಿರ್ವಹಿಸುವುದು
- ಧೂಳು ನಿಯಂತ್ರಣಕ್ಕಾಗಿ ಅರಣ್ಯೀಕರಣ. ವಾಯುಜನ್ಯ ಧೂಳನ್ನು ನಿರ್ಬಂಧಿಸಲು, ಗಣಿ ಮತ್ತು ಗಣಿಗುತ್ತಿಗೆಯ ಒಳಹೊರಗಿನ ವಲಯಗಳಲ್ಲಿ ಹೆಚ್ಚು ಸಸಿಗಳನ್ನು ನೆಡುವುದು
- ಪ್ರಮುಖ ಹೆಚ್ ಇ ಎಂ ಎಂ ಸಲಕರಣೆಯ ಎಲ್ಲಾ ವಸ್ತುಗಳಲ್ಲಿ ಕಾರ್ಯನಿರ್ವಾಹಕ ಕ್ಯಾಬಿನ್ ಗಳನ್ನು ಮುಚ್ಚುವ ಮೂಲಕ, ಕಾರ್ಯನಿರ್ವಾಹಕರಿಗೆ ಧೂಳು ಬೀಳುವುದನ್ನು ಕಡಿಮೆಗೊಳಿಸುವುದು

## 4.2 ಶಬ್ದದ ಪರಿಸರ

ಹಳ್ಳಿಗಳಲ್ಲಿ ಶಬ್ದದ ಪರಿಣಾಮ ನಗಣ್ಯವಾಗಿರುತ್ತದೆ ಏಕೆಂದರೆ ಹಳ್ಳಿಗಳು ಗಣಿಯ ಸ್ಥಳದಿಂದ ದೂರದಲ್ಲಿವೆ. ಗಣಿಯಿಂದ ಅತ್ಯಂತ ಸಮೀಪದ ಹಳ್ಳಿ 1.9 ಕಿಮೀ ಇದೆ. **ಡಿಸಿಬಿಎಲ್** 7.5 ಮೀ ತಡೆ ವಲಯದ ಹಸಿರುಪಟ್ಟಿಯನ್ನು ನೀಡಿದೆ. ಆದ್ದರಿಂದ ಶಬ್ದ ಮಟ್ಟದಿಂದಾಗಿ ಗಣಿಯ ಸ್ಥಳದ ಮೇಲೆ ಬೀರುವ ಪ್ರಭಾವ ಶೂನ್ಯವಾಗಿದೆ.

**ಶಬ್ದ ಮಾಲಿನ್ಯ ನಿಯಂತ್ರಣದ ಮಾನದಂಡಗಳು**

- ವಾಹನ, ಯಂತ್ರ ಮತ್ತು ಇತರ ಸಲಕರಣೆಗಳ ಸೂಕ್ತ ಮತ್ತು ನಿಯಮಿತ ನಿರ್ವಹಣೆ
- ಕೇವಲ ಹಗಲಿನ ಸಮಯದಲ್ಲಿ ಮಾತ್ರ ಸ್ಫೋಟ ನಡೆಸುವುದು ಮೋಡವಿರುವ ದಿನಗಳಲ್ಲಲ್ಲ
- ಅಧಿಕ ಶಬ್ದದ ಕಾರಣ ಕಾರ್ಮಿಕರಿಗೆ ಬಾಧೆಯಾಗದಂತೆ ಸೀಮಿತ ಅವಧಿಯ ಸ್ಫೋಟ
- ಯಂತ್ರದಿಂದ ಉಂಟಾಗುವ ಶಬ್ದವನ್ನು ಯಂತ್ರ ಮತ್ತು ಸಲಕರಣೆಗಳಿಗೆ ಸೂಕ್ತ ಲೂಬ್ರಿಕೇಶನ್ ಮಾಡುವ ಮೂಲಕ ಕಡಿಮೆ ಮಾಡುವುದು
- ನೇಮಿಸಲ್ಪಟ್ಟ ಕಾರ್ಮಿಕರಿಗೆ ಸುರಕ್ಷಾ ಸಲಕರಣೆ, ಕಿವಿ ಮುಚ್ಚುವ ಮಫ್, ಮತ್ತು ಇಯರ್ ಪ್ಲಗ್ ಗಳನ್ನು ಗಣಿಸ್ಥಳದಲ್ಲಿ ಉಂಟಾಗುವ ಅಧಿಕ ಶಬ್ದದ ಮಟ್ಟದಿಂದ ರಕ್ಷಣೆ ನೀಡಲು ಅಗತ್ಯಕ್ಕೆ ತಕ್ಕಂತೆ ನೀಡುವುದು
- ಗರಿಷ್ಟ ಸ್ಫೋಟ ಚಾರ್ಜ್, ಸೂಕ್ತ ವಿಳಂಬ ಪತ್ತೆಮಾಡುವ ಸಾಧನ ಮತ್ತು ಸೂಕ್ತ ಸ್ಟೆಮಿಂಗ್ ಬಳಸುವ ಮೂಲಕ, ರಂಧ್ರಗಳು ಹೆಚ್ಚು ಸಿಡಿಯುವುದನ್ನು ತಡೆದು ಕಡಿಮೆ ಮಾಡಬಹುದು.
- ಗಣಿಗಾರಿಕೆಗೆ ಬಳಸುವ ಯಂತ್ರಗಳನ್ನು ಸರಿಯಾಗಿ ಮತ್ತು ಸಮಯಕ್ಕೆ ಅನುಗುಣವಾಗಿ ನಿರ್ವಹಿಸಬೇಕು
- ಗಣಿ ಸ್ಥಳ ಪ್ರವೇಶಿಸುವ ಅಥವಾ ನಿರ್ಗಮಿಸುವ ಟ್ರಕ್ ಗಳ ವೇಗವನ್ನು ಖಾಲಿ ಟ್ರಕ್ ಗಳಿಂದ ಉಂಟಾಗುವ ಅನಗತ್ಯ ಶಬ್ದದ ಮಟ್ಟವನ್ನು ತಡೆಯಲು ಗಂಟೆಗೆ ಸಾಮಾನ್ಯ 25 ಕಿಮೀ ವೇಗಕ್ಕೆ ಸೀಮಿತಗೊಳಿಸಬೇಕು.

Authorized Signatory

Certified Translation

## 4.3 ನೀರಿನ ಪರಿಸರ

ದೊಡ್ಡ ಹಳ್ಳ ಗಣಿಗುತ್ತಿಗೆ ವಲಯದ ಪಶ್ಚಿಮಕ್ಕೆ 1.6 ಕಿಮೀ ಅಂತರದಲ್ಲಿ ಕಂಡುಬರುತ್ತದೆ.

ಮೇಲ್ಮೈ ನೀರಿನ ವಲಯದಲ್ಲಿ ಉಂಟಾಗಬಹುದಾದ ಯಾವುದೇ ಗಣಿಗಾರಿಕೆಯ ವ್ಯತಿರಿಕ್ತ ಪರಿಣಾಮವನ್ನು ತಡೆಯಲು ಪರಿಣಾಮಕಾರಿ ಮಾನದಂಡಗಳನ್ನು ಅಳವಡಿಸಲಾಗುವುದು. ಗಣಿ ಗುಂಡಿಯುದ್ದಕ್ಕೂ ಶೇಖರಣೆಯ ವೃತ್ತಾಕಾರದ ಗುಂಡಿಗಳನ್ನು ಗಣಿ ವಲಯದಿಂದ ಬರುವ ಕೆಸರನ್ನು ಬಂಧಿಸಲು ನಿರ್ಮಿಸಲಾಗುವುದು. ವೃತ್ತಾಕಾರದ ಗುಂಡಿಗಳ ತುದಿಯಲ್ಲಿ ವಿಲೇವಾರಿಯ ತುದಿಯಲ್ಲಿ ಚೆಕ್ ಡ್ಯಾಂಗಳನ್ನು ನಿರ್ಮಿಸಲಾಗುವುದು. ಗುಂಡಿಯಲ್ಲಿ ನೇರ ಮಳೆಬೀಳುವ ರೀತಿಯಲ್ಲಿ ಗಣಿಗುಂಡಿಯಲ್ಲಿ ಯಾವುದೇ ನೀರು ಸಂಗ್ರಹವಾದರೂ ಅದು ಸಂಪ್ ನಲ್ಲಿ ಸಂಗ್ರಹವಾಗುವುದು ಇದನ್ನು ರಸ್ತೆಯಲ್ಲಿ ಸಿಂಪಡಿಸಲು, ಹಸಿರು ಪಟ್ಟಿಯ ವಲಯಕ್ಕೆ ಮತ್ತೆ ಹಾಯಿಸಲಾಗುವುದು. ಉಳಿದ ಬೇಡದ ಕಣಗಳಿಂದ ಮುಕ್ತವಾದ ನೀರನ್ನು, ಹತ್ತಿರದ ಹಳ್ಳಿಗಳಿಗೆ ಪೂರೈಸಲಾಗುತ್ತದೆ ಅಥವಾ ಗುತ್ತಿಗೆ ಸ್ಥಳದ ಹೊರಗೆ ಹರಿಯುವ ನೀರಿನ ಕಾಲುವೆಗಳಿಗೆ ಬಿಡುಗಡೆ ಮಾಡಲಾಗುವುದು.

ಗಣಿಗುತ್ತಿಗೆ ಸ್ಥಳದ ಮೂಲಕ ನೀರಾವರಿ ಕಾಲುವೆ ಹಾದುಹೋಗುವುದು. ಡಿಸಿಬಿಎಲ್ ಕಾಲುವೆಯನ್ನು ಸ್ಥಳಾಂತರಿಸುವುದಿಲ್ಲ ಹಾಗೂ ಗಣಿಯನ್ನು ಕಾಲುವೆಯ ಉದ್ದಕ್ಕೂ ಸುರಕ್ಷಾ ತಡೆಗೋಡೆ ನೀಡಿದ ನಂತರವಷ್ಟೇ ನಡೆಸಲಾಗುವುದು. ಇದು ಕೇವಲ ಐದನೆಯ ಪಂಚವಾರ್ಷಿಕ ಯೋಜನೆಯಾಗಿದ್ದು, ಕಾಲುವೆಯನ್ನು ರಾಜ್ಯ ಸರ್ಕಾರದ ಸ್ಥಳೀಯ ಪ್ರಾಧಿಕಾರದ ಅನುಮತಿ/ಒಪ್ಪಿಗೆ ಪಡೆದ ನಂತರವಷ್ಟೇ ವಿಭಜಿಸಲು ಉದ್ದೇಶಿಸಲಾಗಿದೆ.

ಗಣಿ ಅವಧಿಯಲ್ಲಿ ಉಂಟಾಗುವ ಮೇಲ್ಭಾಗದ ಮಣ್ಣನ್ನು 7.5 ಮೀ ಕಾನೂನುಬದ್ಧ ತಡೆಯನ್ನು ಬಿಟ್ಟು ಗುತ್ತಿಗೆ ಗಡಿಯ ಭಾಗದುದ್ದಕ್ಕೂ ಕೃಷಿ ಉಪಯೋಗಗಳಿಗೆ ಬಳಸಲಾಗುವುದು.

ಗಣಿ ಕೆಲಸವನ್ನು ಗಣಿಯ ಅವಧಿಯುದ್ದಕ್ಕೂ ನೀರಿನ ಅಚ್ಚುಕಟ್ಟಿನ ಮೇಲ್ಭಾಗದಲ್ಲಿ ನಡೆಸಲಾಗುವುದು.

ಡಿಸಿಬಿಎಲ್ ಧೂಳು ತಗ್ಗಿಸಲು ಮತ್ತು ಹಸಿರುಪಟ್ಟಿ ವಲಯದ ಅಭಿವೃದ್ಧಿಗಾಗಿ ದಿನಕ್ಕೆ ಸುಮಾರು 10 ಎಂ$^3$ ನೀರನ್ನು ಬಳಸಲಾಗುವುದು.

Authorized Signatory

ಕಾರ್ಮಿಕರ ಕಾರ್ಯಾಗಾರ ಮತ್ತು ಇತರ ಸೌಲಭ್ಯಗಳನ್ನು ಎರಡೂ ಗಣಿಗಳಿಗೆ ಸಾಮಾನ್ಯ ಸೌಲಭ್ಯವಾಗಿ ಎಂಎಲ್-1 ರಲ್ಲಿ ನೀಡಿರುವುದರಿಂದ ಯಾವುದೇ ತ್ಯಾಜ್ಯ ನೀರಿನ ಉತ್ಪಾದನೆ ಇರುವುದಿಲ್ಲ.

**4.4 ಭೂಮಿಯ ಪರಿಸರ**

ಒಟ್ಟು 115.33 ಹೆಕ್ಟೇರ್ ನಲ್ಲಿ, ಸುಮಾರು 105.01 ಹೆಕ್ಟೇರ್ ಅನ್ನು ಗಣಿ ಚಟುವಟಿಕೆಗಾಗಿ ಬಳಸಲಾಗುವುದು. ಕೊರೆಯಲಾದ ಸ್ಥಳದಲ್ಲಿ (105.01 ಹೆಕ್ಟೇರ್) 28.11 ಹೆಕ್ಟೇರ್ ಬೆಂಚ್ ವಲಯವನ್ನು ಕೃಷಿಯೋಗ್ಯವನ್ನಾಗಿ ಮಾಡಲಾಗುವುದು, 76.9 ಹೆಕ್ಟೇರ್ ಅನ್ನು ನೀರಿನ ಸಂಗ್ರಾಹಕವಾಗಿ ಮಾರ್ಪಡಿಸಲಾಗುವುದು.

**4.5 ಅರಣ್ಯೀಕರಣ**

ಡಿಸಿಬಿಎಲ್ 10.32 ಹೆಕ್ಟೇರ್ ಗಣಿ ವಲಯವನ್ನು ಅರಣ್ಯೀಕರಣದ ಅಡಿಯಲ್ಲಿ ಎಂದರೆ ಗಣಿಗುತ್ತಿಗೆ ಗಡಿಯುದ್ದಕ್ಕೂ ಮತ್ತು ಬಳಕೆಯಲ್ಲಿಲ್ಲದ ವಲಯದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. 28.11 ಹೆಕ್ಟೇರ್ ವಿಸ್ತೀರ್ಣದ ಭೂಮಿಯನ್ನು ಸುಮಾರು 57000 ಸಸಿಗಳನ್ನು ನೆಡುವ ಮೂಲಕ ಕೃಷಿಯೋಗ್ಯವನ್ನಾಗಿ ಮಾಡಲಾಗುವುದು.

**4.6 ಭೂ ಕಂಪನ ನಿಯಂತ್ರಿಸುವುದು**

ಸ್ಫೋಟ ತಂತ್ರಜ್ಞಾನಕ್ಕೆ ಅನುಗುಣವಾಗಿ ನೋನೆಲ್ ಪದ್ಧತಿಯನ್ನು ಬಳಸಿ ಪ್ರತೀ ವಿಳಂಬಕ್ಕೆ ಗರಿಷ್ಠ ಚಾರ್ಜ್ ನೊಂದಿಗೆ ಸೂಚಿಸಲಾದ ಮಾರ್ಗದರ್ಶನಕ್ಕೆ ಅನುಗುಣವಾಗಿ ಶಿಸ್ತುಬದ್ಧವಾಗಿ ಸ್ಫೋಟಿಸಲಾಗುವುದು; ಸ್ಫೋಟದ ಕಾರ್ಯಾಚರಣೆಯನ್ನು ಗಣಿ ಸುರಕ್ಷಾ ಮಾನದಂಡದ ಪ್ರಕಾರ ಹಗಲಿನ ಸಮಯದಲ್ಲಷ್ಟೇ ನಡೆಸಲಾಗುವುದು.

**4.7 ಸಾಮಾಜಿಕ ಆರ್ಥಿಕ ವಾತಾವರಣ**

ಪುನರ್ವಸತಿ ಮತ್ತು ಪುನರ್ ಸ್ಥಾಪನೆ

Certified Translation TRIDINDIA IT TRANSLATION SERVICES PVT LTD
Authorized Signatory

ಸಂಪೂರ್ಣ ಭೂಮಿ ಕೃಷಿಭೂಮಿಯಾದ್ದರಿಂದ ಮತ್ತು ಯಾವುದೇ ಮಾನವ ವಾಸವಿಲ್ಲದಿರುವುದರಿಂದ ಯೋಜನೆ ಮಾನವ ವಾಸಸ್ಥಾನವನ್ನು ಸ್ಥಳಾಂತರಿಸುವುದನ್ನು ಒಳಗೊಂಡಿಲ್ಲ. ಆದರೆ, ಕಂಪನಿ ಆದ್ಯತೆಯ ಮೇರೆಗೆ ವಿವಿಧ ಸಮುದಾಯ ಅಭಿವೃದ್ಧಿ ಯೋಜನೆಗಳನ್ನು ರೂಪಿಸಿದ್ದು ಇವುಗಳನ್ನು ಭೂಮಿಯನ್ನು ಕಳೆದುಕೊಂಡ ಭೂಮಾಲೀಕರಿಗೆ ಪ್ರಯೋಜನ ನೀಡಲಾಗುವುದು ಮತ್ತು ಸುತ್ತಮುತ್ತಲಿನ ಗ್ರಾಮದ ಸ್ಥಳೀಯ ನಿವಾಸಿಗಳಿಗೆ ಸಹ ಈ ಪ್ರಯೋಜನ ವಿಸ್ತರಿಸಲಾಗುವುದು.

ಸಿಮೆಂಟ್ ಯೋಜನೆ ಸಂಪೂರ್ಣ ಯಾಂತ್ರಿಕ ತಂತ್ರಜ್ಞಾನದೊಂದಿಗೆ ಬಂಡವಾಳ ತೀವ್ರತೆಯನ್ನು ಒಳಗೊಂಡಿರುವುದರಿಂದ, ನೇರ ಉದ್ಯೋಗಾವಕಾಶವನ್ನು, ವಿಶೇಷವಾಗಿ ಕೌಶಲ್ಯರಹಿತ ವರ್ಗಕ್ಕೆ ನೀಡಲಾಗುವುದಿಲ್ಲ. ಆದರೆ, ಪ್ರಸ್ತಾವಿತ ಯೋಜನೆಯಿಂದಾಗಿ ಅನೇಕ ಪರೋಕ್ಷ ಉದ್ಯೋಗಾವಕಾಶಗಳಿವೆ. ವಿವಿಧ ವಲಯಗಳಲ್ಲಿ ಅವರ ಸಾಮರ್ಥ್ಯವನ್ನು ಆಧರಿಸಿ ಆದ್ಯತೆಯ ಮೇರೆಗೆ ಭೂಮಾಲೀಕರಿಗೆ ನೇರ ಉದ್ಯೋಗಾವಕಾಶ ಇತ್ಯಾದಿ ಅವಕಾಶಗಳನ್ನು ನೀಡುವುದು ಕಂಪನಿಯ ನಿಯಮವಾಗಿದೆ. ಅಗತ್ಯ ಕೌಶಲ್ಯ ಇಲ್ಲದಿದ್ದರೆ ಮಾತ್ರ, ಪ್ರಯೋಜನವನ್ನು ಇತರರಿಗೆ ನೀಡಲಾಗುವುದು.

ನೇರ ಉದ್ಯೋಗಾವಕಾಶ ಸೀಮಿತವಾಗಿರುವುದರಿಂದ ಮತ್ತು ಕೌಶಲ್ಯವನ್ನು ಆಧರಿಸಿರುವುದರಿಂದ, ಡಿಸಿಬಿಎಲ್ ಬಾಧೆಗೊಳಗಾದ ಕುಟುಂಬಕ್ಕೆ ಮತ್ತು ಆದಾಯ ಉತ್ಪಾದನೆಯ ಚಟುವಟಿಕೆಗಳಲ್ಲಿ ತೊಡಗಿದ್ದ ಸ್ಥಳೀಯ ವ್ಯಕ್ತಿಗಳಿಗೆ ಪರೋಕ್ಷವಾಗಿ ನೆರವು ನೀಡಲು ಸಾಕಷ್ಟು ಪ್ರಯತ್ನಿಸುತ್ತದೆ. ಡಾ. ಸರೋಜಿನಿ ಮಹಿಷಿ ಸಮಿತಿಯ ವರದಿ ಮತ್ತು ರಾಜ್ಯದ ಔದ್ಯೋಗಿಕ ನಿಯಮಕ್ಕೆ ಅನುಗುಣವಾಗಿ ರಾಜ್ಯಸರ್ಕಾರದ ಉದ್ಯೋಗ ನಿಯಮದೊಂದಿಗೆ ಅನುಸರಣೆ ಹೊಂದುವ ಬಗ್ಗೆ ಡಿಸಿಬಿಎಲ್ ಭರವಸೆ ನೀಡುತ್ತದೆ.

## 5.0 ಯೋಜನೆಯ ಪ್ರಯೋಜನಗಳು

### 5.1 ಉದ್ಯೋಗ

ಈ ಗಣಿಯ ಮಾನವ ಸಂಪನ್ಮೂಲದ ಅಗತ್ಯತೆಯನ್ನು ಎಂಎಲ್-1 ರ ಅಡಿಯಲ್ಲಿ (1228.63 ಹೆಕ್ಟೇರ್) ಪರಿಗಣಿಸಲಾಗುತ್ತದೆ. ಮಾನವ ಸಂಪನ್ಮೂಲ ಪೂರಕ ಗಣಿಗಳೆರಡಕ್ಕೂ ಅನ್ವಯವಾಗುತ್ತದೆ ಮತ್ತು ಇದರಲ್ಲಿ ಸುಮಾರು 70 ವ್ಯಕ್ತಿಗಳಿದ್ದಾರೆ.

Authorized Signatory

TRIDINDIA IT TRANSLATION SERVICES PVT LTD

TRIDINDIA Certified Translation SERVICES PVT LTD

ಇದರೊಂದಿಗೆ ಗುತ್ತಿಗೆ ಕೆಲಸ, ಉದ್ಯಮದ ಅವಕಾಶಗಳು, ಸೇವಾ ಸೌಲಭ್ಯಗಳು ಇತ್ಯಾದಿ ರೂಪದಲ್ಲಿ ಅನೇಕ ಜನರಿಗೆ ಪರೋಕ್ಷ ಉದ್ಯೋಗಾವಕಾಶವಿದೆ. ಇದು ಆರ್ಥಿಕ ಸ್ಥಾನಮಾನವನ್ನು ಹೆಚ್ಚಿಸುತ್ತದೆ.

- **ಇತರ ಸುಸ್ಪಷ್ಟ ಪ್ರಯೋಜನಗಳು:-**

ಭೂಮಾಲೀಕರು ಮತ್ತು ಸ್ಥಳೀಯ ಸಮುದಾಯಗಳು ಕೆಳಗಿನ ಶೀರ್ಷಿಕೆಗಳ ಅಡಿಯಲ್ಲಿ ವಿವಿಧ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳಿಂದ ಪ್ರಯೋಜನ ಪಡೆಯುತ್ತಾರೆ:-

A. *ಯುವಕರು/ಸ್ವ-ಉದ್ಯೋಗಿಗಳಿಗೆ ಸಾಂದರ್ಭಿಕ ತರಬೇತಿ*
B. *ಶೈಕ್ಷಣಿಕ ಸೌಲಭ್ಯಗಳು*
C. *ವೈದ್ಯಕೀಯ ಸೌಲಭ್ಯಗಳು*
D. *ಸ್ಥಳೀಯ ಪ್ರದೇಶದ ವ್ಯಕ್ತಿಗಳಿಗೆ ಯೋಗಕ್ಷೇಮ ಯೋಜನೆ*
E. *ಸ್ಥಳದ ಮೂಲಭೂತ ಸೌಲಭ್ಯದ ಅಭಿವೃದ್ಧಿ*
F. *ಸಮುದಾಯ ಅಭಿವೃದ್ಧಿ/ಸಾಮಾಜಿಕ ಯೋಗಕ್ಷೇಮ ಯೋಜನೆಗಳು*

## 5.2 ಸಾಮಾಜಿಕ ಯೋಗಕ್ಷೇಮದ ಮಾನದಂಡಗಳು

ಎಲ್ಲಾ ಕಂಪನಿಗಳ ಸಾಮಾಜಿಕ ಯೋಗಕ್ಷೇಮ ಚಟುವಟಿಕೆಗಳನ್ನು **"ದಾಲ್ಮಿಯಾ ಭಾರತ್ ಗ್ರೂಪ್ ಫೌಂಡೇಶನ್" (ಡಿಬಿಜಿಎಫ್)** ಮಾರ್ಗದರ್ಶನದ ಅಡಿಯಲ್ಲಿ ಅಳವಡಿಸಲಾಗುವುದು.

ಡಿಸಿಬಿಎಲ್ ಈಗಾಗಲೇ ಸಿಮೆಂಟ್ ಸ್ಥಾವರ ಕಾರ್ಯಾಚರಣೆಯ ಹಂತದಲ್ಲಿರುವುದರಿಂದ ಅಕ್ಕಪಕ್ಕದ ಹಳ್ಳಿಗಳಲ್ಲಿ ವಿವಿಧ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅಳವಡಿಸಲು ಆರಂಭಿಸಿದೆ. ಡಿಸಿಬಿಎಲ್ ಪ್ರತಿಷ್ಠಿತ ಎನ್ ಜಿ ಓ ಡಾ. ರೆಡ್ಡೀಸ್ ಫೌಂಡೇಶನ್ (ಡಿ ಆರ್ ಎಫ್) ನ ಸಹಯೋಗದೊಂದಿಗೆ, ಜೀವನಾಧಾರ ರಚನೆ ಮತ್ತು ವಿಸ್ತರಣೆ, ನಾಗರಿಕ ಮತ್ತು ಮೂಲಭೂತಸೌಕರ್ಯ ಸುಧಾರಣೆ, ಗುಣಾತ್ಮಕ ಆರೋಗ್ಯ ಸೇವೆಗಳು ಮತ್ತು ಸ್ಥಳೀಯರಿಗೆ ಮೂಲ ಶಿಕ್ಷಣ ನೀಡುವ ಗುರಿಯೊಂದಿಗೆ 4 ದೀರ್ಘಾವಧಿ ಕಾರ್ಯಕ್ರಮಗಳನ್ನು ಅಳವಡಿಸಲಿದೆ.

ಪ್ರಸ್ತಾವಿತ ವಲಯದಲ್ಲಿ ನಡೆಸಲಾದ ಮಾಪನ ಅಧ್ಯಯನ ಮತ್ತು ಭಾಗವಹಿಸುವ ಗ್ರಾಮೀಣ ಮಾನದಂಡಗಳ ಅಗತ್ಯಗಳನ್ನು ಆಧರಿಸಿದ ಫಲಿತಾಂಶವನ್ನು ಆಧರಿಸಿ, ಮುಂದಿನ 10 ವರ್ಷಗಳಲ್ಲಿ

Authorized Signatory

Certified Translation
... INDIA TRANSLATION SERVICES PVT. LTD.

ಎಂಎಲ್-1 ಮತ್ತು ಎಂಎಲ್-2 ಎರಡರಲ್ಲೂ ಒಟ್ಟಾಗಿ ಕೆಳಗಿನ ಕಾರ್ಯಕ್ರಮಗಳ ಮೇಲೆ ಕಾರ್ಯ ನಿರ್ವಹಿಸಲು ಉದ್ದೇಶಿಸಲಾಗಿದೆ.

| ಕ್ರ.ಸಂ. | ಕಾರ್ಯಕ್ರಮ | ಪ್ರಾಯೋಗಿಕ ಚಟುವಟಿಕೆಗಳು | ಪ್ರಾಯೋಗಿಕ ನೀಡಿಕೆ (ಲಕ್ಷಗಳಲ್ಲಿ ರೂಪಾಯಿ) |
|---|---|---|---|
| 1 | ಜೀವನಾಧಾರ | ಕೌಶಲ್ಯ ಅಭಿವೃದ್ಧಿ, ಕೃಷಿ ಉತ್ಪಾದಕತೆ, ಉದ್ಯೋಗಾವಕಾಶದ ಹೆಚ್ಚಳ | 70 |
| 2 | ಆರೋಗ್ಯ | ತಡೆಗಟ್ಟಬಹುದಾದ ಮತ್ತು ಗುಣಾತ್ಮಕ ಆರೋಗ್ಯ ಸೇವೆಗಳು | 50 |
| 3 | ಶಿಕ್ಷಣ | ಪೂರ್ವ-ಪ್ರಾಥಮಿಕ ಮತ್ತು ಪ್ರಾಥಮಿಕ ಹಂತಗಳಲ್ಲಿ ಗುಣಮಟ್ಟದ ಶಿಕ್ಷಣದಲ್ಲಿ ಸುಧಾರಣೆ | 30 |
| 4 | ಮೂಲಭೂತ ಸೌಕರ್ಯ | ಅಗತ್ಯ ಆಧಾರಿತ ಅಭಿವೃದ್ಧಿ ಮತ್ತು ಮೂಲಭೂತ ಸೌಕರ್ಯ ನಿರ್ವಹಣೆ, ಸುರಕ್ಷಿತ ಕುಡಿಯುವ ನೀರಿನ ಸೌಲಭ್ಯ ಮತ್ತು ನೀರಿನ ಕೊಯ್ಲು | 80 |
| 5 | ಕ್ರೀಡಾ ಪ್ರೋತ್ಸಾಹ | ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಸಂಸ್ಥೆಗಳನ್ನು ಪ್ರೋತ್ಸಾಹಿಸುವುದು | 20 |
| 6 | ಇತರ | ಕಾಲಕಾಲಕ್ಕೆ ಅಗತ್ಯ ಮಾಪನವನ್ನು ಆಧರಿಸುವುದು | 25 |
| | | **ಒಟ್ಟು:** | **275** |

ಮೇಲಿನ ಬಜೆಟ್ ಅನ್ನು (10 ವರ್ಷಗಳಿಗೆ ರೂ 275 ಲಕ್ಷ) ಡಿಸಿಬಿಎಲ್ ಸಮುದಾಯ/ಸಾಮಾಜಿಕ ಅಭಿವೃದ್ಧಿಗಾಗಿ ಮಂಜೂರು ಮಾಡಿದ್ದು ಇದು ಎರಡೂ ಗಣಿಗಳಿಗೆ ಅನ್ವಯಿಸುತ್ತದೆ. ಆದರೆ, ಸಂಪೂರ್ಣ ಯೋಜನೆಗೆ (ಸಿಮೆಂಟ್ ಸ್ಥಾವರ ಮತ್ತು ಎರಡೂ ಗಣಿಗಳು)(, ಕಂಪನಿ ಕೆಳಗೆ ನಿಗದಿಪಡಿಸಿದಂತೆ ಮುಂದಿನ 5 ವರ್ಷಗಳಿಗೆ ರೂ 4.3 ಕೋಟಿ ಮಂಜೂರು ಮಾಡಿದೆ.

| **2013 ರ ಕಂಪನಿ ಕಾಯ್ದೆ ಶೆಡ್ಯೂಲ್ VII ರ ಅಡಿಯಲ್ಲಿ ಬರುವ ಚಟುವಟಿಕೆಗಳು** | ಕಾರ್ಯಕ್ರಮದ ಸ್ಥಳ | ಪ್ರಾಯೋಗಿಕ ಬಜೆಟ್ ನೀಡಿಕೆ (ಲಕ್ಷಗಳಲ್ಲಿ) | | | | |
|---|---|---|---|---|---|---|
| | ಗುರುತಿಸಲಾದ ಚಟುವಟಿಕೆಗಳು | **2016-17** | **2017-18** | **2018-19** | **2019-20** | **2020-21** |
| ಶೆಡ್ಯೂಲ್ VII (iv) ರ ಅಡಿಯಲ್ಲಿ ಬರುವ ಚಟುವಟಿಕೆಗಳು: ಪರಿಸರ ತಾಳಿಕೆ ಮತ್ತು ಜೈವಿಕ ಸಮತೋಲನದ ಭರವಸೆ, ಮರಗಿಡಗಳು ಮತ್ತು ಪ್ರಾಣಿಗಳ ರಕ್ಷಣೆ. | ಮಣ್ಣು ಮತ್ತು ನೀರಿನ ಸಂರಕ್ಷಣೆ | 28 | 29 | 29 | 30 | 31 |

Authorized Signatory

| 2013 ರ ಕಂಪನಿ ಕಾಯ್ದೆ ಶೆಡ್ಯೂಲ್ VII ರ ಅಡಿಯಲ್ಲಿ ಬರುವ ಚಟುವಟಿಕೆಗಳು | ಕಾರ್ಯಕ್ರಮದ ಸ್ಥಳ | ಪ್ರಾಯೋಗಿಕ ಬಜೆಟ್ ನೀಡಿಕೆ (ಲಕ್ಷಗಳಲ್ಲಿ) | | | | |
|---|---|---|---|---|---|---|
| | ಗುರುತಿಸಲಾದ ಚಟುವಟಿಕೆಗಳು | 2016-17 | 2017-18 | 2018-19 | 2019-20 | 2020-21 |
| ಪ್ರಾಣಿಗಳ ಯೋಗಕ್ಷೇಮಕ್ಕಾಗಿ ಕೃಷಿ ಅರಣ್ಯೀಕರಣ, ಪ್ರಾಕೃತಿಕ ಸಂಪನ್ಮೂಲದ ಸಂರಕ್ಷಣೆ ಮತ್ತು ಮಣ್ಣು, ಗಾಳಿ ಮತ್ತು ನೀರಿನ ಗುಣಮಟ್ಟ ನಿರ್ವಹಣೆ | ನವೀಕರಿಸಬಹುದಾದ ಶಕ್ತಿ ಮತ್ತು ಹವಾಮಾನ ಬದಲಾವಣೆಯನ್ನು ತಗ್ಗಿಸುವುದು | 18 | 18 | 19 | 19 | 20 |
| ಶೆಡ್ಯೂಲ್ VII (ii) ರ ಅಡಿಯಲ್ಲಿ ಬರುವ ಚಟುವಟಿಕೆಗಳು: ವಿಶೇಷ ಶಿಕ್ಷಣ ಮತ್ತು ಮಕ್ಕಳು, ಮಹಿಳೆಯರು, ಹಿರಿಯರು ಮತ್ತು ವಿಕಲಚೇತರಿಗಾಗಿ ವಿಶೇಷವಾಗಿ ವಿಶೇಷ ಶಿಕ್ಷಣ ಮತ್ತು ಸಾಂದರ್ಭಿಕ ಕೌಶಲ್ಯ ಹೆಚ್ಚಿಸುವ ಉದ್ಯೋಗ ನೀಡುವುದು ಮತು ಜೀವನಾಧಾರ ಹೆಚ್ಚಿಸುವ ಯೋಜನೆಗಳು (ಜೀವನಾಧಾರ ಕೌಶಲ, ತರಬೇತಿ) | ಜೀವನಾಧಾರ ಕೌಶಲ್ಯ ತರಬೇತಿ | 2 | 2 | 2 | 2 | 2 |
| ಶೆಡ್ಯೂಲ್ VII ರ ಅಡಿಯಲ್ಲಿ ಬರುವ ಚಟುವಟಿಕೆಗಳು: ವಿಷಯ ಸಂ (i): ಹಸಿವು, ಬಡತನ ಮತ್ತು ಅಪೌಷ್ಠಿಕತೆಯ ನಿವಾರಣೆ, ನಿವಾರಣಾತ್ಮಕ ಆರೋಗ್ಯ ನೀಡಿಕೆ ಮತ್ತು ನೈರ್ಮಲ್ಯ ಹಾಗೂ ಸುರಕ್ಷಿತ ಕುಡಿಯುವ ನೀರು ಲಭ್ಯವಾಗುವಂತೆ ಮಾಡುವುದು (ಸಾಮಾಜಿಕ ಅಭಿವೃದ್ಧಿ) | ಸಾಮಾಜಿಕ ಅಭಿವೃದ್ಧಿ | 28 | 28 | 29 | 30 | 31 |
| | ಕಾರ್ಯಕ್ರಮ ಅಳವಡಿಕೆಯ ವೆಚ್ಚ | 6 | 6 | 6 | 6 | 7 |
| ಒಟ್ಟು | | **82** | **84** | **86** | **88** | **90** |

ಕಳೆದ 2015-16 ರ ಹಣಕಾಸು ವರ್ಷದಲ್ಲಿ, ಕಂಪನಿ ವಿವಿಧ ಕಾರ್ಯಕ್ರಮಗಳಿಗೆ ರೂ 1.00 ಕೋಟಿ ಭರಿಸಿದೆ.

9 ಹಳ್ಳಿಗಳು, 2500 ಕ್ಕೂ ಹೆಚ್ಚಿನ ಜನ, ಸುಮಾರು 500 ಕ್ಕೂ ಹೆಚ್ಚು ಗೃಹಗಳು ದಾಲ್ಮಿಯಾ ಸಿಮೆಂಟ್ ಭಾರತ್ ಲಿಮಿಟೆಡ್ ರಿಂದ ನಡೆಸಲಾದ ವಿವಿಧ ಸಮುದಾಯ ಅಭಿವೃದ್ಧಿ ಚಟುವಟಿಕೆಗಳ ಅಡಿಯಲ್ಲಿ ಪ್ರಯೋಜನ ಪಡೆದಿದ್ದಾರೆ. 12% ನಷ್ಟು ಜನಸಂಖ್ಯೆ ಪರಿಶಿಷ್ಟ ಜಾತಿ ವರ್ಗಕ್ಕೆ ಸೇರಿದ್ದಾರೆ.

Certified Translation

Authorized Signatory

ಈ ಕಾರ್ಯಕ್ರಮಗಳನ್ನು ಕಂಪನಿಯ ಫೌಂಡೇಶನ್ ಆದ, ದಾಲ್ಮಿಯಾ ಭಾರತ್ ಫೌಂಡೇಶನ್ (ಡಿಬಿಎಫ್) ಮೂಲಕ ಅಳವಡಿಸಲಾಗುವುದು.

*ಬೆಳಗಾವಿಯಲ್ಲಿ ಡಿಬಿಎಫ್ ಕಾರ್ಯಕ್ರಮಗಳ ಪ್ರಭಾವ:-*

- 9 ಹಳ್ಳಿಗಳಲ್ಲಿ 5000 ಕ್ಕೂ ಹೆಚ್ಚು ಮನೆಗಳಲ್ಲಿರುವ 25000 ಕ್ಕೂ ಅಧಿಕ ಜನರ ಮೇಲೆ ಪ್ರಭಾವ ಬೀರಿದೆ.
- ಜಿಲ್ಲೆಯಲ್ಲಿ 11000 ಎಂ3 ಗೂ ಅಧಿಕ ಹೆಚ್ಚುವರಿ ನೀರು ಸಂಗ್ರಹ ಸಾಮರ್ಥ್ಯವನ್ನು ರಚಿಸಲು ನೆರವಾಗಿದೆ.
- 1000 ಕ್ಕೂ ಅಧಿಕ ಸೌರಶಕ್ತಿ ಚಾಲಿತ ಮನೆಯ ದೀಪಗಳ ಉತ್ಪನ್ನಗಳು ಮತ್ತು 370 ಇಂಧನ ಬಳಕೆಯ ಅಡಿಗೆ ಒಲೆಗಳನ್ನು ವಿತರಿಸಲಾಗಿದೆ.
- ನಾವು ಇಲ್ಲಿ 86 ಎಸ್ ಹೆಚ್ ಜಿ ಗಳ ರಚನೆಗೆ ಪ್ರೋತ್ಸಾಹ ನೀಡಿದ್ದೇವೆ.
  - ಒಟ್ಟು 1242 ಜನರ ಸದಸ್ಯತ್ವ ಹೊಂದಿದೆ
  - 2014-15 ರ ಅವಧಿಯಲ್ಲಿ ಉಳಿತಾಯ 4 ಲಕ್ಷ ಮೀರಿದೆ

## 6.0 ಪರಿಸರ ಮೇಲ್ವಿಚಾರಣಾ ಕಾರ್ಯಕ್ರಮ

ಡಿಸಿಬಿಎಲ್ ಗಣಿ ವಲಯದೊಳಗೆ ಮಾನದಂಡಗಳ ಅಳವಡಿಕೆಯ ಭರವಸೆ ಮತ್ತು ಪರಿಣಾಮಕಾರಿ ಮೇಲ್ವಿಚಾರಣೆಯನ್ನು ನೀಡಿದೆ.

ಡಿಸಿಬಿಎಲ್ ಪಿಸಿಬಿ/ಐಬಿಎಂ/ಎಂಓಇಎಫ್&ಸಿಸಿ ಮಾರ್ಗದರ್ಶನಗಳಿಗೆ ಅನುಗುಣವಾಗಿ ಪರಿಸರದ ಮಾನದಂಡಗಳ ಮೇಲ್ವಿಚಾರಣೆಯನ್ನು ಮುಂದುವರೆಸಿದೆ

## 7.0 ಪರಿಸರ ನಿರ್ವಹಣಾ ಯೋಜನೆಯ ಅಳವಡಿಕೆಗಾಗಿ ಬಜೆಟ್

ಪರಿಸರ ನಿರ್ವಹಣಾ ಯೋಜನೆಯನ್ನು ಅಳವಡಿಸಲು ಅಂದಾಜು ಬಂಡವಾಳ ವೆಚ್ಚ ರೂ 8 ಲಕ್ಷ ಮತ್ತು ಆವರ್ತನ ವೆಚ್ಚ ವಾರ್ಷಿಕ ರೂ 10.00 ಲಕ್ಷ ಎಂದು ಅಂದಾಜಿಸಲಾಗಿದೆ.

*ಸಮಾಪ್ತಿ*

Certified Translation
TRIINDIA IT SERVICES PVT LTD

TRIINDIA IT TRANSLATION SERVICES PVT. LTD.

Authorized Signatory

ಡಿಸಿಬಿಎಲ್ ಪರಿಸರ ಸ್ನೇಹಿ ಔದ್ಯೋಗಿಕತೆಯ ಪರಿಕಲ್ಪನೆಯಲ್ಲಿ ವಿಶ್ವಾಸ ಹೊಂದಿದೆ. ಸ್ಥಳದಲ್ಲಿ ಒಟ್ಟಾರೆ ಸಾಮಾಜಿಕ ಆರ್ಥಿಕ ಅಭಿವೃದ್ಧಿಯನ್ನು ತರಲು ವಿವಿಧ ಸಾಮಾಜಿಕ ಆರ್ಥಿಕ ಅಭಿವೃದ್ಧಿ ಚಟುವಟಿಕೆಗಳನ್ನು ಪ್ರಸ್ತಾಪಿಸಿದೆ.

Certified Translation

TRIDINDIA IT TRANSLATION SERVICES PVT. LTD.

Authorized Signatory